ಆದರೆ ಮದುವೆ ಮಂಟಪದಲ್ಲಿ ಅನಂತ ಎಲ್ಲರ ಸಮ್ಮುಖದಲ್ಲಿ ನಮಗಾರಿಗೂ ಹೇಳದೇ ಲಾಂಗ್ ನೆಕ್‌ಲೇಸನ್ನು ಧರಾಳಿಗೆ ಸರ್‌ಪ್ರೈಸ್ ಗಿಫ್ಟಾಗಿ ನೀಡಿದ್ದ. ಸುಂದರವಾದ ಕಲಾಕುಸುರಿಯಿಂದ ಕೂಡಿ ಸುಮಾರು ಎಂಬತ್ತು ಗ್ರಾಂ ತೂಗುತ್ತಿತ್ತು. ಪದ್ಮಿನಿ ಕೊಂಕು ನಗೆ ನಗುತ್ತ "ಯಾರನ್ನ ಹಿಡಿದು ತರಿಸಬೇಕೋ ನಮಗೆ ಗೊತ್ತು. ಅಲ್ಲಿಂದ್ಲೇ ತರಿಸಿದ್ವಿ" ಎಂದಾಗ ಅವಾಕ್ಕಾಗುವ ಸರದಿ ನಮ್ಮದಾಗಿತ್ತು. ಎಲ್ಲರೂ ಚಪ್ಪಾಳೆ ತಟ್ಟಿದರೆ ನಮ್ಮ ಮುಖಗಳು ಕಪ್ಪಿಟ್ಟಿದ್ದು ನಿಜ. ಅಂದಿನಿಂದಲೇ ಅಂತರ ಹುಟ್ಟಿಕೊಂಡಿತ್ತು. "ನಮಗ್ಯಾಕೋ ಹೇಳ್ಳಿಲ್ಲ?..." ಎಂದು ನಂತರ ತರಾಟೆಗೆ ತೆಗೆದುಕೊಂಡಿದ್ದೆ. "ತುಂಬಾ ಆಸೆಪಟ್ಟು ಬೇಕೇಬೇಕೂಂತ ಪಟ್ಟು ಹಿಡಿದಳಮ್ಮ. ನಿಮಗೆ ಕೇಳಿದ್ರೆ ಬೇಡಾಂತೀರಿ ಅಂತ ಸರ್‌ಪ್ರೈಸ್ ಗಿಫ್ಟ್ ಮಾಡಿಬಿಟ್ಟೆ" ಎಂದು ಉಲಿದ ಮುದ್ದು ಕಂದನನ್ನು ನೋಡಿ ಅಳಬೇಕೋ ನಗಬೇಕೋ ತಿಳಿಯಲಿಲ್ಲ. ಅಂದೇ ಸುಮಂತನಿಗೆ ಅಣ್ಣನ ಮೇಲಿನ ಪ್ರೀತ್ಯಾದರಗಳು ಅರ್ಧಕ್ಕರ್ಧ ಇಳಿದು ಹೋದವೆಂದೇ ಹೇಳಬೇಕು. ಈಗ ಉಳಿದ ದುಡ್ಡಿನಲ್ಲಿ ಎಲ್ಲಾ ತೂಗಿಸ್ತಾ ಇದ್ರೂ ಸುಮಂತನ ಮದುವೆದೇ ಚಿಂತೆ. ಒಬ್ಬನಿಗೆ ಅದ್ದೂರಿಯಾಗಿ ಮಾಡಿ ಇನ್ನೊಬ್ಬನಿಗೆ ಸರಳವಾಗಿ ಮಾಡಿದರೆ ತಾರತಮ್ಯವಾಗುವುದಿಲ್ಲವೇ? 'ಅವನ ಹಣೆಯಲ್ಲಿ ಬರೆದ ಹಾಗಾಗುತ್ತೆ' ಎಂದುಕೊಂಡು ಸುಮ್ಮನಾದೆ. "ಮೇಲೆ ಡಿಸ್‌ಪ್ಲೇ ಬರ್ತಾ ಇದೆ. ನಿಮ್ಮ ನಂಬರ್ ಯಾವ ಕೌಂಟರ್‌ನಲ್ಲಿ ಬರುತ್ತೆ ನೋಡ್ಕೊಳ್ಳಿ" ಎಂದು ಕೂಗಿದರು. ನನ್ನ ನಂಬರ್ ಮುಂದೆ ಎಫ್12 ಕೌಂಟರ್ ಕಾಣುತ್ತಲೂ ಹೋಗಿ ನಿಂತೆ. "ನಿಮಗೆ ಬೇಕಾದ ಭಾಷೆಯಲ್ಲಿ ಸೂಚನೆಗಳನ್ನು ಓದಿಕೊಳ್ಳಿ" ಎಂದು ಕಾಗದವೊಂದನ್ನು ತಳ್ಳಿದರು. ಕನ್ನಡದಲ್ಲೂ ಸೂಚನೆಗಳು ಕಾಣಿಸಿದವು. 'ಓಹ್!' ಎನ್ನುತ್ತ ಸಂತಸದಿಂದ ಓದಿದೆ. ನಂತರ ಅವೇ ಮಾಮೂಲಿ ಪ್ರಶ್ನೆಗಳು. "ಹೆಸರು... ಸ್ಪೆಲ್ ಮಾಡಿ. ಡೇಟ್ ಆಫ್ ಬರ್ಥ್..." ಇತ್ಯಾದಿ. ಬೆರಳಚ್ಚು ತೆಗೆದುಕೊಂಡರು. ಕನ್ನಡಕ ತೆಗೆಸಿ ಫೋಟೊ ಕ್ಲಿಕ್ಕಿಸಿದರು. ಎಕ್ಸಿಟ್‌ನತ್ತ ಕೈತೋರಿದರು. 'ಅಬ್ಬಾ!' ಹೆದರಿದಂತೇನೂ ಇಲ್ಲವೆನಿಸಿ ನಿರಾಳವಾದೆ.

ಹೊರಗೆ ಕಾಯುತ್ತ ಸುಮಂತ ನಿಂತಿದ್ದ. ಅವನಿಗೆಲ್ಲಾ ವಿಸ್ತಾರವಾಗಿ ವರದಿ ಒಪ್ಪಿಸುತ್ತಲೇ ಆಟೊ ಏರಿದೆ. 'ಸಂಗೀತಾ ವೆಜ್' ಎಂಬ ದೊಡ್ಡ ಹೋಟೆಲ್‌ನ ಮುಂದೆ ನಿಂತಾಗ ಅಳುಕುತ್ತಲೇ ಇಳಿದೆ. "ಸುಮಂತಾ... ಇದ್ಯಾವ್ದೋ ದುಬಾರಿ ಹೋಟೆಲ್ ಅನ್ಸುತ್ತೆ ಕಣೋ. ಬೇರೆ ಯಾವ್ದಾದ್ರೂ.." ಎನ್ನುವಷ್ಟರಲ್ಲಿ "ಸುಮ್ನಿರಮ್ಮ. ನೀವು ಕಷ್ಟಪಟ್ಟು ಗಳಿಸಿದ್ದನ್ನ ಎಲ್ಲರಿಗೂ ಸುರಿಯುವದೇ ಆಯಿತು. ನೀವೂ ಸ್ವಲ್ಪ ಅನುಭವಿಸಬೇಕು. ಹೆದರಬೇಡ. ಬಿಲ್ ನಾನೇ ಕೊಡ್ತೀನಿ ಬಿಡು" ಎಂದು ಕರೆದೊಯ್ದ. ಆಗಲೇ ಮೂರನೇ ಟೇಬಲ್ ಮೇಲೆ ಪದ್ಮಿನಿ, ಪ್ರಶಾಂತ ಊಟ ಮುಗಿಸುತ್ತಿದ್ದರು. ನಾನೇ ಮುಂದೆ ಹೋಗಿ "ಬಯೋಮೆಟ್ರಿಕ್ ಟೆಸ್ಟ್ ಎಲ್ಲ ಸರಿಯಾಗಿ ಆಯಿತಾ?" ಎಂದು ಕೇಳಿದೆ. "ಓ... ಎಲ್ಲ ಆಯ್ತು. ಇವರಿಗೆ ಸ್ಪೆಷಲ್ ಟ್ರೀಟ್‌ಮೆಂಟು. ಜೊತೆಗೆ ನಂಗೂ... ದಾರೀಲಿ ಪುಟ್ಟದಾಗಿ 'ಮೀನಾಕ್ಷಿ ವೆಜ್' ಅಂತ ಹೋಟೆಲಿತ್ತು. ಅಲ್ಲಿಗೇ ಹೋಗ್ತೀರಿ ಅನ್ಕೊಂಡಿದ್ದೆ. ಇಲ್ಲಿಗೆ ಬಂದಿದ್ದೀರಿ. ಪರವಾಗಿಲ್ಲ" ಎಂದು ಕುಟುಕಿದರು. ಪುಣ್ಯಕ್ಕೆ ಸುಮಂತ ಹೋಗಿ ದೂರದ ಟೇಬಲ್ ಎದುರು ಕುಳಿತಿದ್ದ. ಪ್ರಶಾಂತ ತಕ್ಷಣ "ಅಲ್ಲಿ ಚೆನ್ನಾಗಿರಲ್ಲ. ಸುಮಂತ ಇಲ್ಲಿಗೇ ಕರೆತರ್ತಾನೆ ಅಂತ ಗೊತ್ತಿತ್ತು. ಬನ್ನಿ ನೀವೂ ಊಟ ಮಾಡಿ" ಎಂದು ಮಾತು ಮರೆಸಿ ಮುಗಿಸಿದರು. ಕೈ ಮಾಡಿ ಸುಮಂತನತ್ತ ನಡೆದೆ. ಕ್ಷಣಕ್ಷಣಕ್ಕೂ ನಮ್ಮ ಅಂತಸ್ತನ್ನು ಕೆಳಮುಖವಾಗಿ ತೋರುತ್ತಲೇ... ತಿವಿಯುತ್ತಿದ್ದ ಬೀಗಿತ್ತಿಯ ಮಾತುಗಳು ನುಂಗಲಾರದ... ಉಗುಳಲಾರದ ಬಿಸಿತುಪ್ಪವಾಗಿದ್ದು ನಿಜ.

ಆದರೂ ಫಾರ್ಮಾಲಿಟೀಸ್ ಅಂತ ಒಂದಿರುತ್ತಲ್ಲ... "ಬೀಗರನ್ನು ಮಾತಾಡಿಸಿದ್ಯಾ ಸುಮಂತ?" ಎಂದು ಕೇಳಿದೆ. "ಸುಮ್ನೆ ಊಟ ಮಾಡಮ್ಮ" ಎಂದ. ಅವನಿಗೆ ಪದ್ಮಿನಿಯವರನ್ನು ಕಂಡರೆ ಅಷ್ಟಕ್ಕಷ್ಟೆ. 'ಧಿಮಾಕಿನ ಹೆಂಗಸು' ಎಂದು ಬಿರುದು ಕೊಟ್ಟಿದ್ದ. ಅನಂತ, ಧರಾ ಮೊದಲ ಬಾರಿ